


### ಆತಂಕಕ್ಕೆ ಕಾರಣ

'ಅಮ್ಮಂದಿರ ಆತಂಕ', ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ಸೆ. 27) ಅಮ್ಮಂದಿರ ಆತಂಕವನ್ನು ಮತ್ತಷ್ಟು ಹೆಚ್ಚಿಸುವಂತಿದೆ. ಮಕ್ಕಳಿಗೆ ಸ್ವಾತಂತ್ರ್ಯವನ್ನು ಕೊಡದೆ ನಮ್ಮ ಮಕ್ಕಳು ಅಬ್ದುಲ್ ಕಲಾಂ, ಐನ್‌ಸ್ಟೀನ್, ವಿಶ್ವೇಶ್ವರಯ್ಯ ಆಗಬೇಕೆಂದು ಕೊಳ್ಳುವ ಪೊಸೆಸಿವ್‌ನೆಸ್ ಅವರ ಆತಂಕಕ್ಕೆ ಕಾರಣ.

—ಎಂ. ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಶ್ರೀನಾಥ್ ಕೊನೇಟಿ ಬೆಂಗಳೂರು, ಮುಕುಂದ ಹೆರಕಲ್ಲ ಕಲಬುರಗಿ, ಪಿ.ಗೋವಿಂದರಾಜು ಶಿವಮೊಗ್ಗ, ಕೆ.ವಿ. ರಾಜಲಕ್ಷ್ಮಿ, ಎಸ್.ವಿಜಯಕುಮಾರಿ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ

### ಆತ್ಮಹತ್ಯೆ ಪಿಡುಗು

'ನಿಮ್ಮೊಡನೆ'ಯಲ್ಲಿ 'ಮಹಿಳೆಯರ ಆತ್ಮಹತ್ಯೆ' (ಬಿ.ಎಂ. ಹನೀಫ್) ಬರಹ ಚಿಂತನಾರ್ಹ. ಇಂತಹ ಮಾನಸಿಕ ದೌರ್ಬಲ್ಯದ ಪಿಡುಗನ್ನು ನಿಯಂತ್ರಿಸುವ ಪ್ರಯತ್ನ ಆಗಬೇಕಾಗಿದೆ. ಈ ಸಮಸ್ಯೆಯ ಪರಿಹಾರಕ್ಕೆ ಗಂಭೀರ ಚಿಂತನೆ ನಡೆಸಬೇಕಾಗಿದೆ.

—ಪಿ. ಜಯವಂತ ಪೈ ಕುಂದಾಪುರ, ಸುಂದರ್ ಬೆಂಗಳೂರು

### ಹೂವು ಚೆಲುವು

ಫ್ಯಾಷನ್ ಪುಟದಲ್ಲಿ 'ಜಡೆಗಳಲ್ಲಿ ಅರಳಿದ ಹೂವು' (ಉಮಾ ಜಯಕುಮಾರ್) ಲೇಖನ ಮಹಿಳೆಯರ ಮನ ಗೆದ್ದಿತು. 'ಹೂವು ಚೆಲುವೆಲ್ಲ ನಂದೆಂದಿತು, ಹೆಣ್ಣು ಹೂವ ಮುಡಿದು ಚೆಲುವೆ ತಾನೆಂದಳು' ಎಷ್ಟು ಅರ್ಥಗರ್ಭಿತ ಕವಿ ಕಲ್ಪನೆ ಎನಿಸಿತು.

—ಪ್ರಾರ್ಥನಾ ಹೇಮಂತಕುಮಾರ್ ಬೆಂಗಳೂರು

### ವಿನೂತನ ಅನುಭವ

ಪ್ರವಾಸ ಬರಹ 'ಚೆಸಪೀಕೆ ಕೊಲ್ಲಿ ಸೇತುವೆ ಸುರಂಗ' (ಬಿ.ಪಿ. ಶಿವಮೂರ್ತಿ) ಓದುತ್ತಿದ್ದಂತೆ, ಚಿತ್ರಗಳನ್ನು ವೀಕ್ಷಿಸುತ್ತಿದ್ದಂತೆ ಸೇತುವೆ ಸುರಂಗದಲ್ಲಿ ಪ್ರಯಾಣಿಸಿದಂತಹ ವಿನೂತನ ಅನುಭವವಾಯಿತು. ಅಮೆರಿಕನ್ನರ ತಾಂತ್ರಿಕತೆ, ನೈಪುಣ್ಯ, ಕಾರ್ಯತತ್ಪರತೆಯನ್ನು ಶ್ಲಾಘಿಸಬೇಕು.

—ವಿ. ಹೇಮಂತಕುಮಾರ ಬೆಂಗಳೂರು, ಎ.ಪಿ. ರಂಗನಾಥ್ ಮೈಸೂರು, ರವೀಂದ್ರನಾಥ ಶಿ.ಯಡಹಳ್ಳಿ

### ಮೇಲ್ಸೇತುವೆ ಉದ್ದ

ಪ್ರವಾಸ ಬರಹದ ಕೊನೆಯ ಭಾಗದಲ್ಲಿ ನೆನಪಿಡಿ ಎಂಬ ಉಪಶೀರ್ಷಿಕೆಯಲ್ಲಿ 'ಭಾರತದಲ್ಲಿ ರಾಮೇಶ್ವರದ ಬಳಿ 2345 ಕಿಮೀ ಉದ್ದದ ರಸ್ತೆ ಮೇಲ್ಸೇತುವೆ ಕಟ್ಟಲು ತೆಗೆದುಕೊಂಡಿದ್ದು ಬರೋಬ್ಬರಿ ಹದಿನಾಲ್ಕು ವರ್ಷಗಳು' ಎಂದು ಪ್ರಕಟವಾಗಿದೆ. ಇಷ್ಟು ಉದ್ದದ ಮೇಲ್ಸೇತುವೆ ಕಟ್ಟುವುದಾದರೂ ಹೇಗೆ? ಬಹುಶಃ ಅದು 23.45 ಕಿಮೀ ಇದ್ದಿರಬೇಕು.

— ಆರ್.ಜಿ. ಶಾಸ್ತ್ರಿ ರಾಯಚೂರು

### ಉಪಯುಕ್ತ ಸಂಶೋಧನೆ

'ಸೋಲಾರ್ ಕೀಟನಾಶಕ'(ಸಿ.ಎಸ್. ನಿರ್ವಾಣ ಸಿದ್ದಯ್ಯ) ಮಣ್ಣಿನ ಮಗನ ಹೊಸ ಸಂಶೋಧನೆ ರೈತರಿಗೆ ವರದಾನವಾಗಿದೆ. ಹಣ, ಶ್ರಮ, ಸಮಯ ಉಳಿತಾಯ ಮಾಡುವ ಪರಿಸರ ಸ್ನೇಹಿ ಯಂತ್ರದ ಸಂಶೋಧಕ ಮಲೆಬೆನ್ನೂರಿನ ಕರಿಬಸಪ್ಪನವರು ನಿಜಕ್ಕೂ ಅಭಿನಂದನಾರ್ಹರು.

—ಬಿ. ಮನೋಹರ ಚಳ್ಳಕೆರೆ, ರತ್ನಾಕರ ಹೆಗಡೆಕಟ್ಟೆ ಮೂಡಬಿದರೆ

### ನಯೊಮಿ ಸಾಧನೆ

'ಸೆಲೆಬ್ರಿಟಿ' ಅಂಕಣದಲ್ಲಿ 'ಜಪಾನಿನ ಹೆಮ್ಮೆ ನಯೊಮಿ' (ಹನಿ) ಬರಹ ಚೆನ್ನಾಗಿದೆ. ಯುವ ಆಟಗಾರರಿಗೆ ನಯೊಮಿ ಸ್ಫೂರ್ತಿ.

—ಶಕುಂತಲಾ ರೆಡ್ಡಿ ರೂಪನಗುಡಿ, ಬಳ್ಳಾರಿ

